10. ಅನುಬಂಧ – I

ದಿನಾಂಕ 21.7.2004ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು ಕೃಷಿ ಇಲಾಖೆಯಲ್ಲಿ ಹುದ್ದೆಗಳ ಭರ್ತಿ

87 (42) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಪ್ಪ, ಶೃಂಗೇರಿ ಹಾಗೂ ಎನ್.ಆರ್. ಪುರ ತಾಲ್ಲೂಕುಗಳಲ್ಲಿ ಇರುವ ವಿವಿಧ ದರ್ಜೆಯ ಕೃಷಿ ಅಧಿಕಾರಿಗಳು ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಕಾಲಮಿತಿಯೊಳಗೆ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ)		ಮಂಜೂರಾ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
	ಕೊಪ್ಪ ತಾಲ್ಲೂಕು:			
1.	ಸಹಾಯಕ ಕೃಷಿ ನಿರ್ದೇಶಕರು	01	01	–
2.	ಕೃಷಿ ಅಧಿಕಾರಿ	05	01	04
3.	ಸಹಾಯಕ ಕೃಷಿ ಅಧಿಕಾರಿ	02	01	01
4.	ಸಹಾಕಯ ಕೃಷಿ ಅಧಿಕಾರಿ (ರೈತಮಹಿಳೆ)	01	–	01
5.	ಕೃಷಿ ಸಹಾಯಕ	08	04	04
	ಒಟ್ಟು	**17**	**07**	**10**
	ಶೃಂಗೇರಿ ತಾಲ್ಲೂಕು:			
1.	ಸಹಾಯಕ ಕೃಷಿ ನಿರ್ದೇಶಕರು	01	01	–
2.	ಕೃಷಿ ಅಧಿಕಾರಿ	04	–	04
3.	ಸಹಾಯಕ ಕೃಷಿ ಅಧಿಕಾರಿ	02	02	–
4.	ಸಹಾಕಯ ಕೃಷಿ ಅಧಿಕಾರಿ (ರೈತಮಹಿಳೆ)	01	–	01
5.	ಕೃಷಿ ಸಹಾಯಕ	04	01	03
	ಒಟ್ಟು	**12**	**04**	**08**

	ಎನ್.ಆರ್. ಪುರ ತಾಲ್ಲೂಕು:			
1.	ಸಹಾಯಕ ಕೃಷಿ ನಿರ್ದೇಶಕರು	01	01	–
2.	ಕೃಷಿ ಅಧಿಕಾರಿ	04	–	04
3.	ಸಹಾಯಕ ಕೃಷಿ ಅಧಿಕಾರಿ	02	01	01
4.	ಸಹಾಕಯ ಕೃಷಿ ಅಧಿಕಾರಿ (ರೈತಮಿಳೆ)	01	–	01
5.	ಕೃಷಿ ಸಹಾಯಕ	05	04	01
	ಒಟ್ಟು	**13**	**06**	**07**

ಆ) ಆರ್ಥಿಕ ಮಿತವ್ಯಯ ಜಾರಿಯಲ್ಲಿರುವುದರಿಂದ ನೇರ ನೇಮಕಾತಿ ಸ್ಥಗಿತತೆ ಮುಂದುವರೆದಿದ್ದು, ಮುಂಬಡ್ತಿ ಹುದ್ದೆಗಳನ್ನು ಬಡ್ತಿಯಿಂದ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

'ಕಳಪೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಸರಬರಾಜು ಕುರಿತು

88 (43) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಸಾಲಿನಲ್ಲಿ ಶೃಂಗೇರಿ, ಕೊಪ್ಪ ಮತ್ತು ಎನ್.ಆರ್. ಪುರ ತಾಲ್ಲೂಕುಗಳಲ್ಲಿ ಪತ್ತೆಯಾದ ಕಳಪೆಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಪ್ರಕರಣಗಳ ಸಂಖ್ಯೆ ಎಷ್ಟು: (ತಾಲ್ಲೂಕುವಾರು, ಕಂಪನಿವಾರು ವಿವರ ನೀಡುವುದು):

ಆ) ಕಳಪೆ ಗುಣಮಟ್ಟವನ್ನು ಪತ್ತೆ ಮಾಡಲು ಕೃಷಿ ಅಧಿಕಾರಿಗಳಿಗೆ ಸ್ಯಾಂಪಲ್ ತೆಗೆಯುವ ಕೆಲಸ ನಿಗದಿ ಮಾಡಲಾಗುವುದೇ:

ಇ) ಮಾಡಲಾಗಿದ್ದಲ್ಲಿ, ಈ ಮೂರು ತಾಲ್ಲೂಕುಗಳಲ್ಲಿ ಸ್ಯಾಂಪಲ್ ತೆಗೆದ ಪ್ರಕರಣಗಳೆಷ್ಟು (ವಿವರ ನೀಡುವುದು):

ಈ) ಕಳಪೆ ಗುಣಮಟ್ಟದ ಎಂದು ಸಾಬೀತಾಗಿದ್ದಲ್ಲಿ, ಸರ್ಕಾರದವರು ಆ ಬಗ್ಗೆ ತೆಗೆದುಕೊಂಡ ಕ್ರಮಗಳೇನು;

ಶ್ರೀ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಕಳೆದ ಸಾಲಿನಲ್ಲಿ ಮೂರು ತಾಲ್ಲೂಕುಗಳಲ್ಲಿ ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಪರಿವೀಕ್ಷಕರುಗಳು ಸದರಿ ಪರಿಕರಗಳ ಕಾನೂನು/ಕಾಯ್ದೆ ಪ್ರಕಾರ ಸ್ಯಾಂಪಲ್‌ಗಳನ್ನು ತೆಗೆದು ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಫಲಿತಾಂಶಗಳ ಆಧಾರದ ಮೇಲೆ ಗುಣಮಟ್ಟ ಇಲ್ಲದ ಮಾದರಿಗಳೆಂದು ವರ್ಗೀಕರಣ ಮಾಡಲಾಗುವುದು ಹಾಗೂ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ತಾಲ್ಲೂಕು	ಕಡಿಮೆ ಗುಣಮಟ್ಟದ			ಬೀಜ
	ಬೀಜ	ರಸ ಗೊಬ್ಬರ	ಕೀಟನಾಶಕ	ಮಾರಾಟ ಗಾರರು
ಶೃಂಗೇರಿ	1	–	–	KSSC
N.R. ಪುರ	1	–	–	ಕಲ್ಪಿತರು ಟ್ರೇಡರ್ಸ್
ಕೊಪ್ಪ	–	–	–	–